ಓ ಎಸ್ 386/2008

**PW 1**

ದಿಃ 09-04-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ ವಿ.ವಿ.ಕೆ ವಕೀಲರಿಂದ ಪ್ರತಿವಾದಿ ನಂ.6ರ ಪರ;

ನಾನು ವಾದಿಯ ಪತ್ನಿಯಾಗಿರುತ್ತೇನೆ ಎಂದರೆ ನಿಜ, ನನ್ನ ಗಂಡನು ಆರೋಗ್ಯವಾಗಿರುವದಿಲ್ಲ. ನನ್ನ ಪರವಾಗಿ ನನ್ನ ಗಂಡನು ಅಧಿಕಾರ ಪತ್ರ ನೀಡಿರುತ್ತಾನೆ ಸದಿರಿ ಅಧಿಕಾರ ಪತ್ರವನ್ನು ನನ್ನ ಗಂಡನು ಗೋಕಾಕಿನ ನ್ಯಾಯಾಲಯದ ಆವರಣದಲ್ಲಿ ಬರೆದು ಕೊಟ್ಟಿರುತ್ತಾನೆ, ಈ ದಾವೆಯ ಹೂಡಲು ಯಲ್ಲಪ್ಪಾ ( ಇಗಿನ ಪ್ರತಿವಾದಿ ನಂ. 3) ಮಾಹಿತಿ ನೀಡುರುತ್ತಾರೆ ಎಂದರೆ ಸಾಕ್ಷಿಯು ಮೊದಲು ಸದರಿ ಯಲ್ಲಪ್ಪರವರು ಮಾಹಿತಿನೀಡಿರುತ್ತಾರೆ ನಂತರ ನಮ್ಮ ಗಮನಕ್ಕೆ ಬಂದಿರುತ್ತದೆ. ಈ ದಾವೆ ಯಲ್ಲಪ್ಪನು ಹೊಡಿದ ಕಾರಣ ನಮಗೆ ಇದ್ದನ್ನು ನಡೆಸಲು ಬರುವದಿಲ್ಲ ಎಂದರೆ ಗೊತ್ತಿಲ್ಲ, ವಾದ ಪತ್ರದ 3 ನೆ ಕಂಡಿಕೆಯಲ್ಲಿ ಬರೆಸಿರುವ ವಂಶವೃಕ್ಷದಲ್ಲಿ ಇರುವ ಬಸ್ಸಪ್ಪಾ ರವರು ಎಂದು ತಿರಿಕೊಂಡರು ಎಂದು ನನಗೆ ಗೊತ್ತಿಲ್ಲ, ಸದರಿ ಬಸ್ಸಪ್ಪಾರವರಿಗೆ ಈರಪ್ಪಾ ಬಸಲಿಂಗಪ್ಪಾ ಮತ್ತು ಬಸವಣ್ಣೆಪ್ಪಾ ಎಂಬ ಮೂವರು ಮಕ್ಕಳುಇರುತ್ತಾರೆ ಎಂದರೆ ಸರಿ ನಾನು ಸದಿರಿಯವರನ್ನು ನೋಡಿರುವದಿಲ್ಲ, ಮತ್ತು ಈ ಮೂವರು ಜನ ಎಂದು ತಿರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಸದರಿ ಈರಪ್ಪಾರವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ, ಬಸವಣ್ಣೆಪ್ಪರವರಿಗೆ ನಾಗವ್ವಾ ಮತ್ತು ತಾಯವ್ವಾ ಎಂಬ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಅದರಲ್ಲಿ ನಾಗವ್ವಾ ಎಂಬುವವರು ಇಗಾಗಲೆ ತಿರಿಕೊಂಡಿರುತ್ತಾರೆ ಎಂದು ತಿರಿಕೊಂಡಿರುತ್ತಾರೆ ಎಂದು ಹೇಳಲಾಗುವದಿಲ್ಲ ಆದರೆ ಈ ದಾವೆ ಹೂಡಿದ ನಂತರ ತಿರಿಕೊಂಡಿರುತ್ತಾರೆ, ಸದರಿ ನಾಗವ್ವಾರವರನ್ನು ಮಿಡಕನಟ್ಟಿ ಊರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ, ಸದರಿ ನಾಗವ್ವರವರಿಗೆ ಮಕ್ಕಳು ಇರುತ್ತಾರೆ ಎಂದು ಸೂಚಿಸುವ ಪ್ರಶ್ನೆಯನ್ನು ನ್ಯಾಯಲಾಯ ತಳ್ಳಿಹಾಕಿರುತ್ತದೆ ಕಾರಣ ಪ್ರತಿವಾದ ಪತ್ರದಲ್ಲಿ ಇದಕ್ಕೆ ಸಂಭಂದ ಪಟ್ಟ ಯಾವುದೆ ಪ್ರತಿರೋದವನ್ನು ವ್ಯಕ್ತಪಡಿಸಿರುವದಿಲ್ಲ.

ನಮ್ಮ ವಾದ ಪತ್ರದಲ್ಲಿ ಬರೆಸಿರುವ ವಂಶಾವಳಿ ಸಂಪೂರ್ಣವಾಗಿ ಇರುವದಿಲ್ಲ ಎಂದರೆ ಸರಿಯಲ್ಲ ಮತ್ತು ನನಗೆ ವಂಶಾವಳಿಯಲ್ಲಿ ಬರೆಸಿರುವ ಬಸ್ಸಪ್ಪಾ ಈರಪ್ಪಾ ,ಬಸಲಿಂಗಪ್ಪಾ , ಬಸವಣ್ಣೆಪ್ಪಾ ಮತ್ತು ಇವರ ಹೆಂಡತಿಯವರು ಮತ್ತು ಇವರ ಹೆಣ್ಣು ಮಕ್ಕಳ ಬಗ್ಗೆ ಮಾಹಿತಿ ಇದ್ದರು ಕೂಡ ನಾನು ನನ್ನ ವಾದ ಪತ್ರದಲ್ಲಿ ನಮಾದಿಸಿಲ್ಲ ಎಂದರೆ ಸರಿಯಲ್ಲ ಸದರಿ ಬಸ್ಸಪ್ಪಾ ಈರಪ್ಪಾ ,ಬಸಲಿಂಗಪ್ಪಾ ನಡುವೆ ದಾವಾ ಆಸ್ತಿಗಳ ಬಗ್ಗೆ ಯೇನು ವ್ಯವಹಾರ ವಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಆಸ್ತಿಗಳ ಕೂರಿತು ಯಾವ ವ್ಯವಹಾರ ಆಗಿರುದಿಲ್ಲ ಎಂದು ನುಡಿದಿರುತ್ತಾರೆ, ಸದರಿ ಬಸಪ್ಪಾರವರು ತಿರಿಹೋದ ಮೇಲೆ ಆಸ್ತಿಗಳು ಈರಪ್ಪಾ ,ಬಸಲಿಂಗಪ್ಪಾ , ಬಸವಣ್ಣೆಪ್ಪಾರವರ ಹೆಸರುಗಳಿಗೆ ಆಗಿರುತ್ತದೆ ಮತ್ತು ಇವರುಗಳು ಯಾವ ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ಮುಂದುಡಲಾಯಿತು,

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಆಕರ್ಷ್ ಎಂ.)

**ಹೆ.ದಿ.&ನ್ಯಾ.ದಂ.,ಗೋಕಾಕ.**